OS.204/2017

DW-01

ಇಂದು ದಿ.08-06-2023 ರಂದು ಸಾಕ್ಷಿಯು ಹಾಜರಿದ್ದು, ಪ್ರಮಾಣ ವಚನ ಮಾಡಿಸಿ, ಪಾಟೀ ಸವಾಲಿಗೆ ಒಳಪಡಿಸಲಾಯಿತು.

ಮುಂದುವರೆದ ಪಾಟೀ ಸವಾಲು :-ವಾದಿಯ ಪರ ವಕೀಲರಿಂದಃ -

ವಾದಿಯು ಕೆಂಚಿಕೊಪ್ಪ ಗ್ರಾಮದಲ್ಲಿ ವಾಸವಾಗಿದ್ದಾರೆ ಆದರೆ ಬಾಡಿಗೆ ಮನೆಯಲ್ಲಿ ಅಥವಾ ಸ್ವಂತ ಮನೆಯಲ್ಲಿ ವಾಸವಾಗಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ವಾದಿಯು ಸುಮಾರು 30-35 ವರ್ಷಗಳಿಂದ ಗೊತ್ತು. ವಾದಿಯ ತಾಯಿಯನ್ನು ನಾನು ನೋಡಿದ್ದೇನೆ. ವಾದಿಯ ತಾಯಿಗೆ ಒಟ್ಟು 5 ಜನ ಮಕ್ಕಳು ಅದರಲ್ಲಿ 3 ಜನ ಹೆಣ್ಣುಮಕ್ಕಳು ಮತ್ತು 2 ಗಂಡುಮಕ್ಕಳು. ಹೆಣ್ಣು ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ವಾದಿಯ ತಮ್ಮನ ಹೆಸರು ಮಲ್ಲೇಶಪ್ಪ. ವಾದಿಯ ತಮ್ಮ ವ್ಯವಸಾಯ ಮತ್ತು ಕೂಲಿ ಕೆಲಸವನ್ನು ಮಾಡುತ್ತಿದ್ದಾರೆ. ನಾನು ಶಿವಮೊಗ್ಗದಲ್ಲಿ ಮತದಾನವನ್ನು ಹಾಕಿದ್ದೇನೆ. ಶಿವಮೊಗ್ಗ ನಗರದ ರವೀಂದ್ರನಗರ ಬಡಾವಣೆಯ ಮತದಾರರ ಪಟ್ಟಿಯಲ್ಲಿ ನಾನು ಮತದಾನ ಹೊಂದಿದ್ದೇನೆ. ಸದರಿ ದಾವಾದಲ್ಲಿ ಕೊಟ್ಟಿರುವ ವಿಳಾಸ ಸರಿಯಾಗಿದೆ. ನಾನು ಮತ್ತು ನನ್ನ ತಾಯಿ ಒಟ್ಟಿಗೆ ಇದ್ದೇವೆ. ವಾದಪತ್ರದಲ್ಲಿ ನಮೂದಿಸಿರುವ ಪ್ರತಿವಾದಿಗಳು ವಾಸಿಸುತ್ತಿರುವ ವಿಳಾಸದಲ್ಲಿ ನಾವೆಲ್ಲರೂ ವಾಸವಾಗಿದ್ದೇವೆ. ನಾನು ಈಗಲೂ ವಾದಪತ್ರದಲ್ಲಿ ನಮೂದಿಸಿರುವ ಪ್ರತಿವಾದಿಯು ವಾಸಿಸುತ್ತಿರುವ ವಿಳಾಸದಲ್ಲಿಯೇ ನಾನು ವಾಸವಾಗಿದ್ದೇನೆ. ದಾವಾ ಆಸ್ತಿಯಲ್ಲಿ ಪೋಡಿಯನ್ನು ಮಾಡಿಸಿಕೊಡುವಂತೆ ನಾಲ್ಕೈದು ಜನರು ನನ್ನನ್ನು ಕೇಳಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಸಹ ನಾನು ಸಲ್ಲಿಸಿದ ಮತದಾನದ ಭೂತಿನಲ್ಲಿ ಮತದಾನವನ್ನು ಸಲ್ಲಿಸಿರುತ್ತಾರೆ. ನಮ್ಮ ತಂದೆ ಸುಮಾರು 35 ವರ್ಷಗಳ ಹಿಂದೆಯೇ ಕೆಂಚಿಕೊಪ್ಪ ಗ್ರಾಮವನ್ನು ಬಿಟ್ಟಿದ್ದಾರೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೆಂಚಿಕೊಪ್ಪ ಗ್ರಾಮದಲ್ಲಿ ನಮ್ಮ ತಂದೆಗೆ ಸೇರಿದ ಆರ್.ಸಿ.ಸಿ ಮನೆ , ತೋಟ ಮತ್ತು ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಆರ್.ಸಿ.ಸಿ ಮನೆ ಇರುತ್ತದೆ. ದಾವಾ ಆಸ್ತಿಯು ಕೃಷಿ ಜಮೀನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯು ಸೈಟಾಗಿದ್ದು , ಅದನ್ನು ನಮಗೆ ಮಾರಾಟ ಮಾಡಿರುತ್ತಾರೆ. ದಾವಾ ಆಸ್ತಿಯ ಸುತ್ತ-ಮುತ್ತ ಕೊಪ್ಪಲು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕೆಂಚಿಕೊಪ್ಪ ಗ್ರಾಮದಲ್ಲಿ ನಮಗೆ ಸೇರಿದ ಸಾಕಷ್ಟು ಆಸ್ತಿ ಇರುವುದರಿಂದ ವಾರಕ್ಕೆ 3 ರಿಂದ 4 ಬಾರಿ ಹೋ ೀಗಿ ನೋಡಿಕೊಂಡು ಬರುತ್ತೇನೆ. ದಾವಾ ಆಸ್ತಿ ಖಾಲಿ ಜಾಗ ಅದರ ಸುತ್ತಲೂ ಬೇಲಿಯನ್ನು ಹಾಕಿಸಿರುತ್ತೇವೆ. ದಾವಾ ಆಸ್ತಿಯಲ್ಲಿ ತಿಪ್ಪೇ ಮತ್ತು ಬಣವೆ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದೇನೆಂದು ನುಡಿಯುತ್ತಾರೆ. ವಾದಿಯು ನಮಗೆ ಮಾರಾಟ ಮಾಡಿರುವ ಆಸ್ತಿ ಕೃಷಿ ಜಮೀನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ಕೃಷಿಯೇತರ ಭೂಮಿ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳನ್ನು ನಾನೇ ಸೃಷ್ಟಿ ಮಾಡಿಕೊಂಡು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ದಿಃ 21.03.1983 ರ ಕ್ರಯಪತ್ರವನ್ನು ನಾನು ಸೃಷ್ಟಿ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ನಮ್ಮ ತಂದೆ ಶಿವಮೊಗ್ಗದಲ್ಲಿ ಅಗ್ರಿಕಲ್ಚರ್ ನಿರ್ದೇಶಕರಾಗಿ ಸುಮಾರು 1994 ರಿಂದ 1995 ನೇ ಸಾಲಿನಲ್ಲಿ ನಿವೃತ್ತ ಹೊಂದಿರುತ್ತಾರೆ. ಕೆ.ಡಿ. ಬಸಪ್ಪ ನಮ್ಮ ತಾಯಿಯ ತಂದೆ . ವಾದಿ ಮತ್ತು ವಾದಿಯ ತಾಯಿ ಕ್ರಯಪತ್ರವನ್ನು

ಬರೆದುಕೊಟ್ಟಿಲ್ಲ , ಕೆ.ಡಿ. ಬಸಪ್ಪ ನಮ್ಮ ತಾಯಿಯ ತಂದೆ ಕ್ರಯಪತ್ರವನ್ನು ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹಾಕಿದ್ದಾರೆಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಿಃ 31.01.2021 ರಂದು ದಾವಾ ಆಸ್ತಿಗೆ ಅತಿಕ್ರಮಪ್ರವೇಶ ಮಾಡಿ ಗೇಟನ್ನು ನಿರ್ಮಾಣ ಮಾಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಿಃ 26.01.2021 ರಂದು ನಾನು ವಾದಿಯ ವಿರುದ್ಧ ಪೊಲೀಸರಿಗೆ ದೂರನ್ನು ಕೊಟ್ಟಿದ್ದು, ಆ ಸಮಯದಲ್ಲಿ ಪೊಲೀಸರು ವಾದಿಯನ್ನು ಠಾಣೆಗೆ ಕರೆಯಿಸಿ, ನಿಮ್ಮ ಸ್ವಾಧೀನಕ್ಕೆ ತೊಂದರೆ ಕೊಡಬಾರದೆಂದು ನಮಗೆ ತಿಳಿಸಿರುತ್ತಾರೆಂದರೆ ಸರಿಯಲ್ಲ. ದಿಃ 22.01.2021 ರಂದು ವಾದಿಯು ನಮ್ಮ ವಿರುದ್ಧ ಪೊಲೀಸ್ ದೂರನ್ನು ಕೊಟ್ಟಿದ್ದಾರೆಂದರೆ ಸರಿಯಲ್ಲ. ನನಗೆ ದಾವಾ ಅಸ್ತಿಯ ಮಾಲೀಕತ್ವವೂ ಇಲ್ಲ ಮತ್ತು ನಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನಾನು ದೌರ್ಜನ್ಯದಿಂದ ದಾವಾ ಆಸ್ತಿಗೆ ಗೇಟನ್ನು ನಿರ್ಮಿಸಿ , ಸ್ವಾಧೀನವನ್ನು ಪಡೆದುಕೊಂಡಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಹೊನ್ನಾಳಿ.